R No KR 12

16 - 2 - 1975

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಬಾಜ್ಪೆ ಪೋಲಿಸ್ ಠಾಣೆ ಸಬ್ ಇನ್ಸ್‌ಪೆಕ್ಟರ್‌ರ ಸಸ್ಪೆಂಡ್

ಧರಣಿ ನಿರ್ಧಾರ

ಕರ್ನಾಟಕ ರಾಜ್ಯದ ಉಪಾಧ್ಯಾಯರ ಸಂಘದ ಬೆಂಗಳೂರು ಶಾಖೆಯ ನೂರಕ್ಕೆ ಹೆಚ್ಚು ಪ್ರತಿನಿಧಿಗಳು ಸರ್ಕಾರದ ಗಮನ ಕ್ಕೆ ತಮ್ಮ ಕುಂದುಕೊರತೆಗಳನ್ನು ತರಲು ವಿಧಾನ ಸೌಧದ ಮುಂದೆ ಒಂದು ದಿವ ಧರಣಿ ನಡೆಸಲಿರುವರು.

○

ಭಂಗಾರ ವಶ

ಮೈಸೂರು ತ್ಯಾಗರಾಜ ರಸ್ತೆಯ ಗಿರಿ ವಿ ಅಂಗಡಿಯ ಮೇಲೆ ಕೇಂದ್ರ ಅಬ್ಕಾರಿ ಇಲಾಖೆಯವರು ದಾಳಿ ಮಾಡಿ ರೂ 10-4 ಲಕ್ಷ ಬೆಲೆಯ 38 ಕೆ ಜಿ ಭಂಗಾರ, ಭಂಗಾರದ ಆಭರಣಗಳನ್ನು ವಶಪಡಿಸಿ ಕೊಂಡರು.

★

ಧೂಮಪಾನ ಮಾಡಿದವರಿಗೆ ಸಂಘ

ಧೂಮಪಾನ ಮಾಡದವರು ಪಾಸಿಂಗ್ ಸ್ಮೋಕಿಂಗ್ ಸಂಘವನ್ನು ಸ್ಥಾಪಿಸಿಕೊಂಡಿರುವರು. ಧೂಮಪಾನದ ವಿರುದ್ಧ ಧ್ವನಿಗಳನ್ನು ಹರಡಿಸುತ್ತಾ ಬೀದಿಯಲ್ಲಿ ಕೆಲಸಮಾಡುವವರಿಗೆ ಈ ಸಂಬಂಧದ ಗುಂಡಿಗಳನ್ನು ಉಚಿತವಾಗಿ ಹಂಚುತ್ತಿದ್ದಾರೆ ಎಂದು ಹೇಳಿದರು

★

ಗಲಾ ಗ್ಯಾಲರಿಗೆ ಪ್ರತಿಮೆ

ಎರಡು ಲಕ್ಷ ರೂಪಾಯಿಗಳ ಬೆಲೆಯ ಜೋಳರ ಕಾಲದ ಶ್ರೀ ತಿರುಪುರಂಥಕಾರ್ ಇವರ ಪಂಚಲೋಹದ ವಿಗ್ರಹವನ್ನು ಕೆಲ ಗ್ರಾಮಸ್ಥರು ನಾಲ್ಕು ಸಾವಿರ ರೂಪಾಯಿ ಗಳಿಗೆ ಮಾರುತ್ತಿದ್ದುದನ್ನು ಕಂಡು, ತಂಜಾವೂರು ಜಿಲ್ಲಾ ಕಲೆಕ್ಟರರು ಅಲ್ಲಿಯ ಕಲಾ ಗ್ಯಾಲರಿಯಲ್ಲಿ ಅದನ್ನು ಇಡಲು ಆಜ್ಞೆ ಮಾಡಿದರು

★ರಿಜಿಸ್ಟ್ರೇಷನ್ ಇಲಾಖೆಯಲ್ಲಿ ರಿಜಿಸ್ಟರ್ ಆದ ದಸ್ತಗಳನ್ನು ಮೈಕ್ರೋ ಫಿಲಂ ಮಾಡುವ ಯೋಜನೆ ಪ್ರಾಯೋಗಿಕ ಪರೀಕ್ಷೆಯಲ್ಲಿದೆಯೆಂದು ಬೆಂಗಳೂರು ವಾರ್ತೆ.

ದಿವ್ಯವಾಣಿ

ರಾಜ್ಯದ ಅಭಿವೃದ್ಧಿಗಾಗಿ ಮೂತ್ರ ಸುಳ್ಳನ್ನು ಹೇಳಲು ಹಿಂಜರಿಯಬಾರದೆಂದು ಹೊಂದಿರಬೇಕು ರಾಜ್ಯದ ಒಳಿತಿಗಾಗಿ ಅವರು ಸುಳ್ಳನ್ನು ಕೇಳಲು ಅವಕಾಶ ಕೊಡಬಹುದು — ಫ್ಲೇಟೊ.

ಶೇವಿಗೆ ರಾಜ

ಫ್ಲಾರಿಡಾದ ಮೈಕ್ ಆಫ್ರಿಟ್ " ಶೇವಿಗೆ ರಾಜ " ಪ್ರಶಸ್ತಿ ಗಳಿಸಿದ್ದಾನೆ ಒಂದೂವರೆ ಗಂಟೆ ಅವಧಿಯಲ್ಲಿ 25 ಸ್ಪರ್ಧಿಗಳನ್ನು ಸೋಲಿಸಿ ಅವನು 2 ಕೆ ಜಿ 510 ಗ್ರಾಮುಗಳ ಶೇವಿಗೆ ತಿಂಡಿ ಮುಗಿಸಿದ.

★

ಅಂಬೆಗಾಲಿನಲ್ಲಿ ಕ್ರಮಿಸಿದ

ಸೈಕಾ ವಿದಾ ಥಿ ಟೀವಂ ತಾಲೀವಿ ಅಪೂರ್ವ ದಾಖಲೆಯೊಂದನ್ನು ಸ್ಥಾಪಿಸಿದ್ದಾನೆ 9 ಕಿಲೋ ಮೀಟರು ದೂರವನ್ನು ಅಂಬೆಗಾಲಿರಿಸಿಕೊಂಡು 8 ಗಂಟೆ 58 ನಿಮಿಷಗಳಲ್ಲಿ ಅತ ಕ್ರಮಿಸಿದ ದಾಖಿ ಗಾಗಿ ನಾನು ಇದನ್ನು ಮಾಡಿದೆ ಎಂದು ಹೇಳಿದ್ದಾನೆ ಅವನು

★

ಮಂಗಗಳ ಪ್ರತಿಭಟನೆ

ಬ್ರಿಟನ್ನಿನಲ್ಲಿ ಈಗ ತಲೆದೋರಿರುವ ಸಕ್ಕರೆ ಅಭಾವವು ಜೆರ್‌ವುಡ್ ಮೃಗಾಲಯದಲ್ಲಿ ಮಂಗಗಳಿಂದ ಉಗ್ರ ಪ್ರತಿಭಟನೆ ಹಿಡಿದೆ ಸಕ್ಕರೆ ಇಲ್ಲದೆ ಕೋಕೋವನ್ನು ತಿನ್ನಲು ನಿರಾಕರಿಸಿದ ಮಂಗಗಳು ಚಟ್ಟೆಯನ್ನು ಮೃಗಾಲಯದ ಪಾಲಕರ ಮುಖಕ್ಕೆ ಅಪ್ಪಳಿಸಿದುವು ಅಧಿಕಾರಿಗಳು ಪೋಲೀಸರಿಂದ ಬೇಡಿ ತರಬೇಕಾಯಿತು.

★ ನೀರಿಲ್ಲದೆ ಪರಿತಪಿಸುತ್ತಿರುವ ಮದರಾಸು ಜನರು ಮಳೆಗಾಗಿ ಭಾನುವಾರ ಸಾಮೂಹಿಕ ಪ್ರಾರ್ಥನೆ ಸಭೆ ನಡೆಸುವರು.

ಪತ್ರಿಕಾಗೋಷ್ಠಿ

ಮೈಸೂರು ಪುರಸಭೆಯ ಕಮೀಷನರ್ ಶ್ರೀ ಎಸ್ ಸ್ವತಂತ್ರರಾವ್‌ರವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ನಗರದ ಹೋಟಲುಗಳ ಪರಿಸ್ಥಿತಿ ತುಂಬಾ ಕೆಟ್ಟದೆಯೆಂದು ಹೇಳಿ, ಹೋಟಲುಗಳಲ್ಲಿ ಕಲಬೆರಕೆ ಮತ್ತು ಅನಾರೋಗ್ಯ ಪರಿಸ್ಥಿತಿ ಕುರಿತು ಖಂಡಿತವಾದ ಎಚ್ಚರಿಕೆ ನೀಡಿ, 2 ಪ್ರಮುಖ ಹೋಟಲುಗಳಿಗೆ ಲೈಸನ್ಸ್ ವಜಾ ಮಾಡುವ ಕುರಿತು ನೋಟಿಸ್ ನೋಟೀಸ್ ಕೊಡಲಾಗಿದೆ ಎಂದರು ಪ್ರಧಾನವಾಗಿ ಹೆಲ್ತ್ ಇನ್ಸ್‌ಪೆಕ್ಟರ್‌ರಿಗೆ ಸಮುಚಿತ ಕ್ರಮ ಕೈಗೊಳ್ಳಲಾಗಿದೆ ಎಂದರು ನಗರದ ಕೊಳಚೆಗಳನ್ನು ಗೊಬ್ಬರವಾಗಿ ಪರಿವರ್ತಿಸಲು ರೂ. 80 ಲಕ್ಷ ವೆಚ್ಚದಲ್ಲಿ ಕಂಪೋಸ್ಟ್ ಯಂತ್ರಾಗಾರ ನಿರ್ಮಿಸುವ ವಿಚಾರ ಅವರು ವಿವರಿಸಿದರು ಕಳೆದ ವರ್ಷದ ಪ್ರಗತಿಯನ್ನು ಅವರು ವಿವರಿಸುತ್ತಾ, ಸಾಂಕ್ರಾಮಿಕ ರೋಗಗಳು ಪೂರ್ಣ ಹತೋಟಿಗೊಂಡಿರುವುದೆಂದೂ, ರಸ್ತೆ ಕಾರ್ಯಗಳಿಗೆ 36 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆಯೆಂದೂ, ರೂ 350 ಲಕ್ಷದ 3 ನೇ ಹಂತದ ನೀರು ಸರಬರಾಜು ಯೋಜನೆಗೆ ರೂ. 80 ಲಕ್ಷ ಖರ್ಚು ಮಾಡಿದೆ ಎಂದರು ದೇವರಾಜ ಮಾರ್ಕೆಟ್ ಉತ್ತಮಗೊಳಿಸಲು ಅಂಗಡಿ ಬಾಡಿಗೆ ಹೆಚ್ಚಿಸಲಾಗುತ್ತಿದೆಯೆಂದೂ ಅವರು ನುಡಿದರು.

●

ಗಲಾಟೆ ದೃಶ್ಯ

ಆಂಧ್ರ ಶಾಸನ ಸಭೆಯಲ್ಲಿ ಅಂದಾಜು ಪಟ್ಟಿ ಮಂಡಿಸಿದಾಗ ಗಲಾಟೆ ದೃಶ್ಯಗಳಿಂದ ಕೂಡಿತ್ತೆಂದು ಹೈದರಾಬಾದು ವಾರ್ತೆ.

● ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀ ಭಾಸ್ಕರ್ ಸಮಿತಾರವರ ಕೊಲೆ ಸಂಬಂಧದಲ್ಲಿ ಬಾಜ್ಪೆ ಪೋಲೀಸು ಠಾಣೆ ಸಬ್ ಇನ್ಸ್‌ಪೆಕ್ಟರ್ ಹಾಗೂ ಇಬ್ಬರು ಹೆಡ್ ಕಾನ್ಸ್‌ಟೆಬಲ್‌ರನ್ನು ಸಸ್ಪೆಂಡು ಮಾಡುವದಾಗಿ ಶಾಸನಸಭೆಯಲ್ಲಿ ತಿಳಿಸಲಾಯಿತು.

ಜಯಪ್ರಕಾಶರ ಕರೆ

ಜನತೆಯ ಹಾಗೂ ದೇಶದ ಹಿತಕ್ಕಲ್ಲದೆ ತಾವು ಯೋಚಿಸಿದ ಸರ್ಕಾರಿ ಆಜ್ಞೆಗಳಿಗೆ ವಿಧೇಯರಾಗಿರಬಾರದೆಂದು ಸರ್ಕಾರಿ ನೌಕರರಿಗೆ ನೌಕರರ ಅತಿ ಭಾರಿ ಮೇಳದಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಮಾಡಿದ ಭಾಷಣದಲ್ಲಿ ತಿಳಿಸಿದರು ಅಂಥ ಆಜ್ಞೆಗಳನ್ನು ಪ್ರಧಾನಿ ಹಾಗೂ ಗೃಹಮಂತ್ರಿಯವರು ಹೊರಡಿಸಿದರು ವಿಧೇಯರಾಗಿರಬಾರದೆಂದು ಹೇಳಿದರು ಎಂದು ನವ ದೆಹಲಿ ವಾರ್ತೆ.

ಪ್ರಧಾನರ ಕೋಪ

ನವ ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರಧಾನಿಯವರು ಕೋಪದಿಂದ, ತಾವು ನಿರುದ್ಯೋಗ, ಬೆಲೆ ಏರಿಕೆ, ಶಿಕ್ಷಣ ಹಾಗೂ ಚುನಾವಣೆ ಸುಧಾರಣೆ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಮಾತುಕತೆಗಳನ್ನು ನಡೆಸಬೇಕೆಂದು ಪದೇ ಪದೇ ಹೇಳುತ್ತಿರುವವರನ್ನು ಕುರಿತು ಯಾರೊಡನೆ ಯಾರ ಮೂಲಕ ನಾನು ಮಾತನಾಡಬೇಕು ಎಂದು ಕೋಪದಿಂದ ಪ್ರಶ್ನಿಸಿದರು.

ವಿರೋಧಿಗಳ ಕಳವಳ

ಕಾಂಗ್ರೆಸ್‌ನಿಂದ ದೇಶದ ಮೇಲೆ ಬಂಗ್ಲಾ ದೇಶದ ಮಾದರಿ ಸರ್ವಾಧಿಕಾರ ಹೇರಬಹುದೆಂಬ ಶಂಕೆಯ ಬಗ್ಗೆ ಶ್ರೀ ಜಯಪ್ರಕಾಶ ನಾರಾಯಣರು ದೇಶದ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿ ಕುರಿತು ವಿರೋಧ ಪಕ್ಷದ ನಾಯಕರೊಡನೆ ಮಾತುಕತೆ ನಡೆಸಿದರು ತುರ್ತು ಪರಿಸ್ಥಿತಿ, ಆಂತರ ರಕ್ಷಣಾ ಶಾಸನದ ವಿಶೇಷತೆಯುಳ್ಳ ದ ಬಳಕೆ, ನಾಗರೀಕ ಸ್ವಾತಂತ್ರ್ಯ ಹರಿಣೆ ಕುರಿತು ವಿರೋಧ ನಾಯಕರು ತೀವ್ರ ಕಳವಳ ವ್ಯಕ್ತಪಡಿಸಿದರು.

★ಗುಜರಾತಿನಲ್ಲಿ ಶಾಸನ ಸಭೆಗೆ ಬೇಗನೆ ಚುನಾವಣೆ ನಡೆಸಬೇಕೆಂದು ಸಂಸ್ಥಾ ಕಾಂಗ್ರೆಸ್‌ನವರು ಚಳುವಳಿ ಹೂಡಲಿರುವರು.

(೭)

ವಿವಾಹಮಹೋತ್ಸವ

ಬೆಂಗಳೂರು— ಸೌ ॥ ಬಿ ಎಸ್ ಗೌರಮ್ಮ, ಬಿ ಎ (ಬೆಂಗಳೂರು ನಗರಂ ಭವೃದ್ಧಿ ಮಂಡಲಿ ಅಧ್ಯಕ್ಷರು ಶ್ರೀ ಬಿ. ಟಿ. ಸೋಮಣ್ಣನವರ ಪುತ್ರಿ) ಮತ್ತು ಚಿ ॥ ಎಂ ಬಿ. ಜಯಚೆಲುವರ್, ಬಿ ಇ (ಮಳವಳ್ಳಿ ಶ್ರೀ ಹೆಚ್. ಬಸಪ್ಪನವರ ಪುತ್ರ) ಇವರ ವಿವಾಹಮಹೋತ್ಸವವು ಶುಕ್ರವಾರ ವೈಭವವಾಗಿ ನೆರವೇರಿತು.

ಬೆಲೆ ಇಳಿಸಲು

ಕಡಪ— ಕಾಲೇಜುಗಳ ವಿದ್ಯಾರ್ಥಿಗಳು ಹೋಟಲುಗಳಲ್ಲಿ ತಿಂಡಿ ಬೆಲೆ ಕಡಿಮೆ ಬೇಕೆಂದೂ ಸಿನಿಮಾ ಚಾರ್ಜು ಕಡಮೆಯಾಗಬೇಕೆಂದೂ ಕೇಳಿಕೆ ಹಾಕಿ ಘೋಷಣೆ ಮಾಡುತ್ತಾ ಮೆರವಣಿಗೆ ನಡೆಸಿದರು.

ಜೆ ಪಿ ಚಳವಳಿಗೆ ಬೆಂಬಲ

ಗುಲ್ಬರ್ಗ— ಬೀಹಾರಿನಲ್ಲಿನ ಶ್ರೀ ಜಯಪ್ರಕಾಶನಾರಾಯಣರ ಚಳವಳಿಗೆ ಬೆಂಬಲವಾಗಿ, ಸ್ಥಳೀಯ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು – ಪ್ರಜಾಕಾಲ್ಯದ ಸಾವು ಚಿತ್ರಿಸಿದ ಪ್ರತಿರೂಪವನ್ನು ಸುಟ್ಟರು.

ಬಂಧನ – ಬಿಡುಗಡೆ

ಮೈಸೂರು — ಚುನಾವಣೆ ವಿಲಂಬವನ್ನು ಪ್ರತಿಭಟಿಸಿ, ಮುನಿಸಿಪಲ್ ಆಫೀಸು ಪಿಕೆಟ್ ಮಾಡಲು ಕೊಟ್ಟಿದ್ದ ಕರೆ ಸಂಬಂಧದಲ್ಲಿ ಶನಿವಾರ ಕನ್ನಡ ಕ್ರಾಂತಿ ದಳದ 27 ಮಂದಿ ಬಂಧಿಸಲ್ಪಟ್ಟು ನಂತರ ಬಿಡುಗಡೆ ಮಾಡಲ್ಪಟ್ಟರು.

ದಿವ್ಯವಾಣಿ

ದಬ್ಬಾಳಿಕೆ ನಡೆಸುವ ಸರಕಾರವು, ಹುಲಿಗಿಂತಲೂ ಹೆಚ್ಚಾಗಿ ಹೆದರಿಕೊಳ್ಳುತ್ತದೆ
ಬೇಕಾಗುವುದಾಗಿದೆ — ಕನ್ಫ್ಯೂಷಿಯಸ್

ವುಡ್‌ಲಾಂಡ್ 14 2 75 ರಿಂದ

ಅಮೋಘ 2ನೇ ವಾರ

ದಿ ಚೇಟ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ವಿನೋದ್ ಖನ್ನ ಮೌಸಮಿ ಚಟರ್ಜಿ ದಿನ ೫ ಪ್ರದರ್ಶನಗಳು

ಅಪೆರಾ 14 2 75 ರಿಂದ

ಬಾಲನಾಗಮ್ಮ

ಅಮೋಘ ತೆಲಗು ಚಿತ್ರ

ಪಾತ್ರ– ಎನ್ ಟಿ ಆರ್ ಅಂಜಲಿ ದೇವಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivaramper Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore